ದಿನಾಂಕ: 15-12-2016 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

: ಮುಂದುವರೆದ ಪಾಟೀ ಸವಾಲು : ಶ್ರೀ ಹೆಚ್ ಆರ್ ಕೆ ಪ್ರತಿವಾದಿ ಪರ ವಕೀಲರಿಂದ :

2ನೇ ಪ್ರತಿವಾದಿಯ ಸ್ವಾಧೀನದಲ್ಲಿರುವ ಸ್ವತ್ತಿಗೆ ಪೂರ್ವಕ್ಕೆ-ರಸ್ತೆ , ಪಶ್ಚಿಮಕ್ಕೆ- ನಮ್ಮ ಜಮೀನು, ಉತ್ತರಕ್ಕೆ- ನಮ್ಮದೇ ಜಾಗ, ದಕ್ಷಿಣಕ್ಕೆ-ನಮ್ಮದೇ ಹುಣಸೆಮರಗಳು ಇವೆ. ಪಶ್ಚಿಮಕ್ಕೆ ಇರುವ ನಮ್ಮ ಜಮೀನು ನಮ್ಮ ಸ್ವಾಧೀನದಲ್ಲಿ ಇದೆ. ಉತ್ತರಕ್ಕೆ ಇರುವ ಜಾಗದಲ್ಲಿ ಶ್ರೀಧರಪ್ಪ ಇವರು ಸ್ವಾಧೀನದಲ್ಲಿ ಇದ್ದು ಬೇಲಿ ಹಾಕಿಕೊಂಡಿರುತ್ತಾರೆ. ದಕ್ಷಿಣಕ್ಕೆ ನಮ್ಮ ಸ್ವಾಧೀನದಲ್ಲಿರುವ ಹುಣಸೆ ಮರಗಳು ಇವೆ. 3ನೇ ಪ್ರತಿವಾದಿಯ ಜಮೀನಿಗೆ ಚಕ್ಕುಬಂದಿ ಪೂರ್ವಕ್ಕೆ-ದಾರಿ, ಪಶ್ಚಿಮಕ್ಕೆ ನಮ್ಮದೇ ಜಮೀನು ಸ್ವಾಧೀನದಲ್ಲಿದೆ, ಉತ್ತರಕ್ಕೆ ನಮ್ಮಸ್ವಾಧೀನದಲ್ಲಿರುವ ಹುಣಸೆಮರಗಳು, ದಕ್ಷಿಣಕ್ಕೆ - ಬೀರೆನಹಳ್ಳಿಯ ಮೂಗಜ್ಜನಹಟ್ಟಿ ಇದೆ. 3ನೇ ಪ್ರತಿವಾದಿಗೆ ಬೇರೆ ಯಾವುದೇ ಜಮೀನು ಸ್ವಾಧೀನದಲ್ಲಿ ಇಲ್ಲ. 2 ಮತ್ತು 3 ನೇ ಪ್ರತಿವಾದಿಗಳಿಗೆ ಸ್ವಾಧೀನದಲ್ಲಿರುವ ಜಮೀನಿನ ಮದ್ಯದಲ್ಲಿ ನಮ್ಮ ಸ್ವಾಧೀನದಲ್ಲಿರುವ ಜಮೀನು ಹಾಗು ಮರಗಳು ಇವೆ.

ನಾನು ದಾವಾ ಬಿ ಷಡ್ಯೂಲ್ ಸ್ವತ್ತುಗಳಲ್ಲಿ 2 , 3 ನೇ ಪ್ರತಿವಾದಿಗಳ ಪ್ರತ್ಯೇಕ ಸಾವಧೀನವನ್ನು ತೋರಿಸಿರುತ್ತೇನೆ. ದೊಡ್ಡಪಾತಪ್ಪ ಸ್ವಾಧೀನದಲ್ಲಿ ಇರುವ ಸ್ವತ್ತಿನ ಅಳತೆ 15:19 ಅಡಿಗಳು ಅಂದಾಜು ಇರುತ್ತವೆ. ಈ ವಿಸ್ತೀರ್ಣವನ್ನು ದಾವಾ ಷಡ್ಯೂಲ್‌ನಲ್ಲಿ ಹೇಳಿಲ್ಲ. ಈ ವಿಚಾರವನ್ನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿಲ್ಲ. ದಾವೆಯಲ್ಲಿ ಕೇಳಿರುವ ಪರಿಹಾರಕ್ಕೆ ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಮಗೆ ಸೇರಿದ ಸ್ವತ್ತಿನಲ್ಲಿ ಅತಿಕ್ರಮ ಪ್ರವೇಶ ಮಾಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ದಾವೆ ಹಾಕುವ ಮೊದಲು ಅವರು ಮಾಡಿದ ಅತಿಕ್ರಮದ ಬಗ್ಗೆ ನೋಟಿಸ್ ಕೊಟ್ಟಿಲ್ಲ. ನಾವು ಠಾಣೆಗೆ ಹೋಗಿ ಈ ವಿಚಾರದ ಬಗ್ಗೆ ದೂರು ನೀಡಿದ್ದೇವು. ಪೋಲಿಸ್ ಠಾಣೆಯಲ್ಲಿ ದಾಖಲಾತಿ ನೋಡಿ ನಮಗೆ ಜಾಗ ಬಿಟ್ಟುಕೊಡಬೇಕೆಂದು ತೀರ್ಮಾನಿಸಿದರು. ಆದರೂ ಸಹ ಅವರು ಬಿಟ್ಟು ಕೊಡದಿದ್ದರಿಂದ ದಾವೆ

ಹಾಕಿರುತ್ತೇನೆ. ಠಾಣೆಯಲ್ಲಿ ತೀರ್ಮಾನವಾಗಿ ಈಗ 7-8 ವರ್ಷಗಳಾಗಿರುತ್ತವೆ. ಆ ಬಗ್ಗೆ ಯಾವುದೇ ದಾಖಲೆ ಇಲ್ಲ. ನಾವು ಬಿ-ಷಡ್ಯೂಲ್ ಸ್ವತ್ತಿಗೆ ಮಾಲೀಕರಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ವಕೀಲರು ದಾಖಲಾತಿಯನ್ನು ತೋರಿಸಲು ಸಮಯ ಕೋರಿದ್ದು ಈಗಾಗಲೇ ಪಾಟೀ ಸವಾಲಿಗೆ ಸಾಕಷ್ಟು ಸಮಯ ನೀಡಿದ್ದು ಸಕಾರಣ ಇಲ್ಲ ಎಂದ ಮುಂದುವರೆದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಗಿದೆ)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು